ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 271/2019 CW: 1 P.W.1

| | |
|---|---|
| ಸಾಕ್ಷಿದಾರರ ಹೆಸರು | ಃ ಸುದರ್ಶನ |
| ತಂದೆ/ಗಂಡನ ಹೆಸರು | ಃ ಸುಬ್ಬರಾಯಪ್ಪ |
| ವಯಸ್ಸು | ಃ 26 ವರ್ಷ |
| ವೃತ್ತಿ | ಃ ವ್ಯವಸಾಯ |
| ವಾಸಸ್ಥಳ | ಃ ಜಂಗಾಲಪಲ್ಲಿ |

**ಪ್ರಮಾಣೀಕರಿಸಲಾದ ದಿಃ 07.10.2022**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ದಿನಾಂಕ 08.06.2019 ರಂದು ಮಧ್ಯಾಹ್ಣ 1.30 ರಸಮಯದಲ್ಲಿ ಬಾಡಿಗೆ ಟ್ರ್ಯಾಕ ರ್ ನಲ್ಲಿ ಉಳುಮೆ ಮಾಡುತ್ತಿದ್ದಾಗ ಆರೋಪಿಗಳು ಬಂದು ನನ್ನ ಮೇಲೆ ಗಲಾಟೆ ಮಾಡಿ 1 ನೇ ಆರೋಪಿಯು ಮಚ್ಚಿನಿಂದ ನನ್ನ ತಲೆ ಮೇಲೆ, 2 ನೇ ಆರೋಪಿಯು ತಲೆಯ ಹಿಂಭಾಗಕ್ಕೆ ಮತ್ತು ಬೆನ್ನಿನ ಮೇಲೆ ಗಾಯ ಪಡಿಸಿರುತ್ತಾರೆ. 3 ಮತ್ತು 4 ನೇ ಆರೋಪಿಗಳು ನನ್ನನ್ನು ಕೆಳಗೆ ತಳ್ಳಿ ಮೂಗೇಟು ಮಾಡಿರುತ್ತಾರೆ. ನಂತರ ನನ್ನ ತಂದೆ ಚಾಸಾ 4 ರವರು ಬಂದು ಅಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಎರಡು ದಿನ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ಬಂದು ನಂನ್ನ ದೂರುಹೇಳಿಕೆ ಪಡೆದಿರುತ್ತಾರೆ ಅದನ್ನು ನಿಪಿ 1 ಎಂದು ಗುರುತಿಸುತ್ತಾರೆ. ಆರೋಪಿಗಳ ವಿರುದ್ದ ಅಸಲುದಾವೆಯಲ್ಲಿ ತಾತ್ಕಾಲಿಕ ನಿರ್ಬಂದ ಕಾಯ್ದೆ ಜಾರಿಯಲ್ಲಿದ್ದರು ಕೂಡ ನನ್ನ ಜಮೀನಿನ ಬಳಿ ಬಂದುಗಲಾಟೆ ಮಾಡಿರುತ್ತಾರೆ. ಹೊಡೆತಕ್ಕೆ ಬಳಸಿದ ದೊನ್ನೆ ಮತ್ತು ಮಚ್ಚನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಎಮ್ ಒ 1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ

ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಆರೋಪಿಗಳು ಬಂದು ನನಗೆ ಅವ್ಯಾಚ್ಯ ಶಬ್ಧಗಳಿಂದ ನಿಂದನೆ ಮಾಡಿದ್ದಾರೆ ಎಂದರೆ ಸರಿ. ಜಮೀನು ನಮ್ಮದು ಉಳುಮೆ ಮಾಡಬೇಡಿ ಎಂದು ಬೆದರಿಕೆ ಹಾಕಿದರು ಎಂದರೆ ಸರಿ. 1 ನೇ ಆರೋಪಿ ಬಲಗೈ ಮಧ್ಯದ ಬೆರಳಿಗೆ ನೋವುಂಟು ಮಾಡಿದ್ದಾರೆ ಎಂದರೆ ಸರಿ. 2 ನೇ ಆರೋಪಿ ನನ್ನ ಬೆನ್ನಿಗೆ ಹೊಡೆದು ಮೂಗೇಟು ಮಾಡಿದ್ದಾರೆ ಎಂದರೆ ಸರಿ. 3 ಮತ್ತು 4 ನೇ ಆರೋಪಿಗಳು ನನ್ನನ್ನು ಕೆಳಕ್ಕೆ ತಳ್ಳಿ ಕಾಲಿನಿಂದ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿ. ಪೋಲೀಸರಿಗೆ ನಾನು ಮರುಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಃ– ಎಸ್. ಎ. ಎಮ್ ಅವರಿಂದ**

ನಾನು ಐ ಟಿ ಐ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನ ಡ ಒದಲು ಬರೆಯಲು ಬರುತ್ತದೆ. ಗಲಾಟೆ ನಡೆದ ಜಮೀನು ಸರ್ವೆ ನಂ 28/3 ಎ ನಮಗೆ ಸಂಬಂಧಿಸಿದ್ದು ಇರುತ್ತದೆ. ಅದು ಟಿ. ಎನ್ ಸುಬ್ಬರಾಯಪ್ಪರವರ ಹೆಸರಿನಲ್ಲಿ ಇರುತ್ತದೆ. ಮೊದನಿಂದಲೂ ಸದರಿ ಸ್ವತ್ತಿನಲ್ಲಿ ನಾವೇ ಸ್ವಾಧೀನ ದಲ್ಲಿದ್ದೇವೆ. ಅಲ್ಲಿ ಟೋಮೊಟೋ , ಬಿಟ್ರೂಟ್, ಕ್ಯಾರೇಟ್ ಮತ್ತು ಸೋತೆಕಾಯಿ ಬೆಳೆಯತ್ತಿದ್ದೆವು. ಆರೋಪಿಗಳು ಮತ್ತು ನನ್ನ ತಾತಾ ಸಂಬಂಧಿಕರು ಇರುತ್ತಾರೆ. ಸದರಿ ಸ್ವತ್ತಿನಲ್ಲಿ ಸುಮಾರು ವರ್ಷಗಳಿಂದ ಆರೋಪಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ಸ್ವತ್ತಿಗೆ ಸಂಬಂಧಿಸಿದ ಅಸಲು ದಾವಾ ಸಂಖ್ಯೆ ನನಗೆ ಗೊತ್ತಿಲ್ಲ. ನಾವು ಆರೋಪಿಗಳ ವಿರುದ್ಧ ದಾವೆ ಸಲ್ಲಿಸಿದ್ದೇವೆ. ಸ್ವತ್ತಿನಲ್ಲಿ ನಾವೇ ಸ್ವಾಧೀನ ಇದ್ದೇವೆ ಎಂದು ಸ್ಟೇ ಕೇಳಿ ದಾವೆ ಸಲ್ಲಿಸಿದ್ದೇವೆ.

2. ಈ ಹಿಂದೆ ಎರಡು ಮೂರು ಸಲ ಗಲಾಟೆ ನಡೆದಿರುತ್ತದೆ. ಈ ಹಿಂದೆ ನಡೆದ ಗಲಾಟೆಗೆ ಸಂಬಂಧಿಸಿದಂತೆ ಠಾಣೆಯಲ್ಲಿ ದೂರು ದಾಖಲಿಸಿದ್ದೇವೆ. ಆ ದೂರುಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಡುವುದಿಲ್ಲ ಎಂದು ಬರೆದು ಕೊಟ್ಟಿರುತ್ತಾರೆ. ಸ್ಟೇ ಸಿಕ್ಕ ಬಗ್ಗೆ ನಾನು ದಾಖಲೆ

ನೋಡಿ ತಿಳಿದುಕೊಂಡಿದ್ದೇನೆ. ದಾವೆ ಇತ್ಯರ್ಥಕ್ಕೆ ಇನ್ನು ಬಾಕಿ ಇದೆ. ಅಸಲು ದಾವಾ ಸಂಖ್ಯೆ 448/2015 ಎಂದರೆ ಇರಬಹುದು.

3. ಗಲಾಟೆ ಸಮಯ ಸುಮಾರು 10 ನಿಮಿಷ ನಡೆದಿರುತ್ತದೆ. 1 ನೇ ಆರೋಪಿ ಮಚ್ಚಿನಿಂದ ತಲೆಯ ಎಡಭಾಗಕ್ಕೆ ಹೊಡೆದಿರುತ್ತಾರೆ. ತಲೆಗೆ ಹೋಲಿಗೆ ಹಾಕಿರುತ್ತಾರೆ. ಎಷ್ಟು ಹೋಲಿಗೆ ಹಾಕಿದ್ದಾರೆ ಗೊತ್ತಿಲ್ಲ. ಘಟನೆ ನಡೆದ ದಿನ ನಾನು ಠಾಣೆಗೆ ಹೋಗಿಲ್ಲ. ಚಾಸಾ 4 ಅಂಬುಲೈನ್ಸ್ ಅನ್ನು ಕರೆಸಿರುತ್ತಾರೆ. ಚಾಸಾ 4 ಸ್ಥಳದಲ್ಲಿ ಇರಲಿಲ್ಲ. ಸ್ಥಳದಲ್ಲಿ ನಮ್ಮನ್ನು ಹೊರತು ಪಡಿಸಿ ಚಾಸಾ 2 ಮತ್ತು 3 ಇದ್ದರು. ಟ್ರ್ಯಾಕ್ಟರ್ ಅನ್ನು ಚಲಾಯಿಸುತ್ತಿದ್ದವರು ಚಾಸಾ 3. ಸ್ವಾಧೀನಕ್ಕೆ ಸಂಬಂಧಿಸಿದಂತೆ ಅನೇಕ ವರ್ಷಗಳಿಂದ ವ್ಯಾಜ್ಯ ಇದೆ ಎಂದರೆ ಸರಿಯಲ್ಲ. ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣಗಳು ನ್ಯಾಯಾಲಯದಲ್ಲಿ ಇವೆ ಎಂದರೆ ಸರಿ. ಘಟನೆ ಸಮಯದಲ್ಲಿ ಆರೋಪಿಗಳು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

4. ಎಷ್ಟು ವರ್ಷಗಳ ಹಿಂದೆ ಮದುವೆ ಆಗಿದ್ದಾರೆ ಗೊತ್ತಿಲ್ಲ. 4 ನೇ ಆರೋಪಿ 10 ವರ್ಷಗಳಿಂದ ಡೆಲ್ಲಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಘಟನೆ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹೇಳಿಕೆ ಪಡೆದುಕೊಂಡ ಪೋಲೀಸರ ಹೆಸರು ಗೊತ್ತಿಲ್ಲ. ಹೇಳಿಕೆ ಪಡೆಯಲು ಸುಮಾರು 08.15 ಕ್ಕೆ ಬಂದಿರುತ್ತಾರೆ. 2 ದಿನ ಒಳರೋಗಿಯಾಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಸ್ವತ್ತನ್ನು ಕಬಳಿಸಲು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಅನೇಕ ಬಾರಿ ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಲು ನಾವು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ನಮಗೆ ಗೊತ್ತಿರುವವರನ್ನು ತೋರಿಸಿದ್ದೇವೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ 1 ವಾರದ ನಂತರ ಠಾಣೆಗೆ ಹೋಗಿದ್ದೇನೆ. ಠಾಣೆಯಲ್ಲಿ ನನ್ನ ಮರುಹೇಳಿಕೆ ಪಡೆದಿರುತ್ತಾರೆ, ದಿನಾಂಕ ನೆನಪಿಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ವಿದ್ಯಾರ್ಥಿ ಇದ್ದು ಅವರು ಸ್ಥಳದಲ್ಲಿ ಇರಲಿಲ್ಲ ಎಂದರೆ

ಸರಿಯಲ್ಲ. 4 ನೇ ಆರೋಪಿಯನ್ನು ವಿನಃ ಕಾರಣ ಈ ಪ್ರಕರಣದಲ್ಲಿ ಸೇರಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ